

ಸಮಸ್ಯೆ ಸೃಷ್ಟಿಯಾಗುತ್ತದೆ. ತನ್ನ ಒಡನಾಡಿಯು ಸ್ವತಂತ್ರ ವ್ಯಕ್ತಿಯಾಗಿ ಏಳ್ಗೆ ಹೊಂದುವುದನ್ನು ನೋಡಿ ಸಂತೋಷಪಡಲಾರದೆ, ಅಭದ್ರತೆಯನ್ನು ಅನುಭವಿಸುವ ವ್ಯಕ್ತಿ ಬಾಳಿನ ಸಹಪಯಣಿಗನಾಗಿ ಹೇಗೆ ನಿಲ್ಲಬಲ್ಲ? ಕುಟುಂಬದ ಸದಸ್ಯೆಯರಿಗೆ ಆಯ್ಕೆಗಳು ಇರಬಾರದು ಮತ್ತು ಅವರು ತಮ್ಮ ಸೇವೆಗೆ ಸದಾ ಸಿದ್ಧರಾಗಿರಬೇಕು ಎಂದು ಬಯಸುವ ವ್ಯಕ್ತಿಗಳಿಂದಾಗಿ ಕೌಟುಂಬಿಕ ವ್ಯವಸ್ಥೆಗೆ ಧಕ್ಕೆ ಬರುತ್ತದೆಯೇ ಹೊರತು, ತನ್ನ ಬದುಕನ್ನು ತಾನು ರೂಪಿಸಿಕೊಳ್ಳುವ ಛಲವುಳ್ಳ ಮಹಿಳೆಯರ ದೆಸೆಯಿಂದಾಗಿ ಅಲ್ಲ' ಎನ್ನುತ್ತಾರೆ ಪ್ರೀತಿ.

## ಹರಿಯುವ ನದಿಗೆ ನೂರೆಂಟು ತಡೆ

ಮಹಿಳೆಯರು ಸ್ವತಂತ್ರರಾಗಿ ಕಾರ್ಯನಿರ್ವಹಿಸುವಾಗ ಅಥವಾ ಆಕೆಯು ಜಗತ್ತನ್ನು ಮುಕ್ತವಾಗಿ ನೋಡಲು ಬಯಸಿದಾಗ, ಚಲನಶೀಲಳಾದಾಗ ಆಕೆಯನ್ನು ತಡೆಯುವ ಪ್ರಯತ್ನ ನಡೆಯುವುದನ್ನು ಎಲ್ಲ ಕಡೆಯಲ್ಲಿಯೂ ಕಾಣಬಹುದು. ಅದಕ್ಕೆ ದೇಶದ ಗಡಿಗಳ ಹಂಗಿಲ್ಲವೆನಿಸುತ್ತದೆ. ಆಕೆಯು ಯಾವಾಗ ಸಮಸ್ಯೆ ಎದುರಿಸುತ್ತಾಳೋ, ಆ ಸಂದರ್ಭದಲ್ಲಿಯೂ ಅವಳನ್ನೇ ಅಪರಾಧಿಯನ್ನಾಗಿ ಮಾಡಲಾಗುತ್ತದೆಯೇ ಹೊರತು, ಸಮಸ್ಯೆಯನ್ನು ಸೃಷ್ಟಿಸಿದವರನ್ನು ಪರಿಗಣಿಸುವುದು ಬಹಳ ಕಡಿಮೆ. ಅಮೆರಿಕದಲ್ಲಿ ಬಹಳ ಸುದ್ದಿಯಾದ ಪ್ರಕರಣವೊಂದು ನೆನಪಾಗುತ್ತದೆ. ಭಾರತೀಯ ಮೂಲದ ಗರ್ಭಿಣಿಯು ಅಲ್ಲಿ ಆಸ್ಪತ್ರೆಗೆ ದಾಖಲಾಗಿ ಅನಿವಾರ್ಯವಾಗಿ ಗರ್ಭಪಾತ ಮಾಡಿಸಿಕೊಳ್ಳಬೇಕಾಗಿ ಬಂತು. ಆ ಸಂದರ್ಭದಲ್ಲಿ ಅವಳ ನಿರ್ಧಾರವನ್ನೇ ತರಾಟೆಗೆ ತೆಗೆದುಕೊಂಡು ವಾದವಿವಾದಗಳು ನಡೆದವು. ಈ ಪ್ರಕರಣ ನ್ಯಾಯಾಲಯದ ಮೆಟ್ಟಿಲೇರಿದಾಗ, ಆಕೆಯ ನಿರ್ಧಾರವೇ ತಪ್ಪು ಎಂಬ ತೀರ್ಪು ಹೊರಬಿದ್ದು, ಆಕೆಗೆ ಜೈಲು ಶಿಕ್ಷೆಯಾಯಿತು. ಆದರೆ ಎಲ್ಲಿಯೂ ಆಕೆ ಗರ್ಭ ಧರಿಸಲು ಕಾರಣನಾದ ವ್ಯಕ್ತಿಯ ಪಾತ್ರದ ಬಗ್ಗೆ ಆಕ್ಷೇಪ ವ್ಯಕ್ತವಾಗಲಿಲ್ಲ... ಅಸುರಕ್ಷಿತ ಲೈಂಗಿಕತೆಯನ್ನು ನಡೆಸಿದ ಆತನ ಹೊಣೆಗಾರಿಕೆಯ ಬಗ್ಗೆಯೂ ಮಾತು ಬರಲಿಲ್ಲ.

ಸರಳವಾಗಿ ಬಚಾವ್ ಆಗುವ ಅವಕಾಶಗಳನ್ನು ಸಮಾಜವು ಗಂಡಿಗೆ ಒದಗಿಸಿಕೊಟ್ಟಿದೆ ಎಂದಮೇಲೆ ಸಮಾನತೆಯ ಆಶಯ ಸಾಕಾರವಾಗುವುದಾದರೂ ಹೇಗೆ? ಒಟ್ಟಿನಲ್ಲಿ ಸಾಮಾಜಿಕ ನಿಯಮಗಳನ್ನು ಪುರುಷರ ಪರವಾಗಿ ಇರಿಸಿಕೊಂಡು ತಾವು ಹಾಕಿದ ಚೌಕಟ್ಟುಗಳೊಳಗೇ ಇರುವಂತೆ ಮಹಿಳೆಯರಿಗೆ ಉಪದೇಶ ನೀಡುವುದು ಇಂದಿಗೂ ನಡೆದೇ ಇದೆ. ಚೌಕಟ್ಟಿಗೆ ಸೀಮಿತವಾಗದೇ ಇದ್ದಾಗ ಆಕೆಯನ್ನು ಅಪರಾಧಿಯನ್ನಾಗಿಯೋ ಅಥವಾ ದಾರಿ ತಪ್ಪಿದವಳೆಂದೋ ಗುರುತಿಸುವ ಹಳೆಯ ಕ್ರಮಕ್ಕೆ ಮುಕ್ತಿ ಸಿಕ್ಕಿಲ್ಲ ಎನ್ನುತ್ತಾರೆ ಪ್ರೀತಿ.

ತಂತ್ರಜ್ಞಾನ ಮತ್ತು ಆರ್ಥಿಕ ಸ್ವಾತಂತ್ರ್ಯವು ಮಹಿಳೆಗೆ ಹಲವು ಅವಕಾಶಗಳನ್ನು ಒದಗಿಸುತ್ತಿರುವ ಸಂದರ್ಭದಲ್ಲಿ, ಅವುಗಳ ಲಾಭ ಪಡೆದುಕೊಂಡು ಮಹಿಳೆಯರು 'ರಿಲ್ಯಾಕ್ಸ್' ಆಗಿರುವುದು ಇಂದು ತಕ್ಕಮಟ್ಟಿಗೆ ಸಾಧ್ಯವಾಗಿದೆ. ಕೌಟುಂಬಿಕ ವ್ಯವಸ್ಥೆಯಲ್ಲಾಗಿರಬಹುದು, ಅಥವಾ ಸಾಮಾಜಿಕ ವ್ಯವಸ್ಥೆಯಲ್ಲಾಗಿರಬಹುದು – ಇಂತಹ 'ರಿಲ್ಯಾಕ್ಸ್' ಆಗುವ ಮನಸ್ಥಿತಿಯು ದೊರೆತಾಗ ಮಹಿಳೆ ತನ್ನ ಕುಟುಂಬದ ಒಳಿತಿನ ಬಗ್ಗೆಯೇ ಯೋಚಿಸುತ್ತಾಳೆ.

ಒಬ್ಬ ಮಹಿಳೆಗೆ ವಿದ್ಯೆ ದೊರೆತರೆ ಇಡೀ ಕುಟುಂಬಕ್ಕೇ ವಿದ್ಯೆ ದೊರೆತಂತೆ ಎಂಬ ನಂಬಿಕೆಯನ್ನು ಮಹಿಳೆ ಹುಸಿ ಮಾಡಿದ್ದಿಲ್ಲ. 'ಹೊಸಿಲು ದಾಟಿದ ಮಹಿಳೆ ದಾರಿ ತಪ್ಪಿದ್ದಾಳೆ' ಎಂಬ ತಪ್ಪುಕಲ್ಪನೆಯು ಇಂದು ಉಳಿದಿಲ್ಲ. ಹೊಸಿಲು ದಾಟಿದ ಮಹಿಳೆ ಸಾಧಕಿಯಾಗಲು ಹೊರಟಿದ್ದಾಳೆ ಎಂಬ ಗ್ರಹಿಕೆಯೊಂದಿಗೆ ಆಕೆಗೆ ಪ್ರೋತ್ಸಾಹ ದೊರೆತಾಗ ಆಕೆಯ ದಾರಿಯೂ ಹಸನಾಗಬಹುದೇನೋ? ಅಲ್ಲಿ ಮನುಕುಲದ ಎಲ್ಲರ ಏಳ್ಗೆಯ ಆಶಯ ಅಡಕವಾಗಿರುತ್ತದೆ.

ಹೆಣ್ಣೇನೋ ಮನೆಯ ಹೊಸಿಲು ದಾಟಿ ಮುನ್ನಡೆದಿದ್ದಾಳೆ. ಗಂಡು ತನ್ನ ಪೂರ್ವಗ್ರಹಗಳ ಹೊಸಿಲು ದಾಟುವುದಷ್ಟೇ ಬಾಕಿಯಿದೆ.

ಪ್ರತಿಕ್ರಿಯಿಸಿ: feedback@sudha.co.in



ಮಹಿಳೆಯರಿಗೆ ಸೌಕರ್ಯಗಳು ದೊರೆತರೆ ಅವರು ಏನೇನು ಕೆಲಸಗಳನ್ನು ಮಾಡುತ್ತಾರೆ ಎಂಬುದನ್ನು ನಾವು ಕಣ್ಣಾರೆ ಕಾಣುತ್ತೇವೆ. ಅವರು ತಮ್ಮ ಕುಟುಂಬವು ಮತ್ತಷ್ಟು ಚೆನ್ನಾಗಿರಲಿ ಎಂದು ಹೆಚ್ಚು ದುಡಿಯುತ್ತಾರೆ. ಮನೆಯ ಎಲ್ಲ ಸದಸ್ಯರ ಒಳಿತಿಗಾಗಿ ಏನೆಲ್ಲ ಮಾಡಬಹುದು ಎಂದು ಆಲೋಚಿಸುತ್ತಾರೆ. ಅಷ್ಟೆಲ್ಲ ಶ್ರಮಪಡುವಾಗ, ದುಡಿಯುವಾಗ, ಒಂದಿಷ್ಟು ವಿರಾಮವೋ, ಪ್ರವಾಸವೋ ಬೇಕು ಎಂದು ಅವರಿಗೆ ಅನಿಸುವುದು ಸಹಜ ಅಲ್ಲವೇ. ವಿಶ್ರಾಂತಿ, ವಿರಾಮ ಮತ್ತು ಪ್ರವಾಸಗಳನ್ನು ಗಂಡು ತನ್ನ ಶ್ರಮದಾಯಕ ದುಡಿಮೆಯ ನಡುವೆ ಬೇಕಾಗುವ ಅಗತ್ಯ ಎಂದು ಪರಿಭಾವಿಸುತ್ತಾರೆ. ಆದರೆ ಅದೇ ಅಗತ್ಯ ಹೆಣ್ಣಿಗೂ ಇದೆ ಎಂಬುದನ್ನು ಅರಿತುಕೊಳ್ಳಲು ನಿರಾಕರಿಸುವುದು ಎಷ್ಟು ಸರಿ? ಆದ್ದರಿಂದ, ಅವಳ ದುಡಿಮೆ ಅವಳ ಹಕ್ಕು ಎಂದು ಹೇಳಿದಂತೆಯೇ, ಅವಳ ವಿರಾಮ ಅವಳ ಹಕ್ಕೂ ಹೌದು.

**–ಡಾ. ಎಚ್.ಎಸ್. ಅನುಪಮಾ**

ವೈದ್ಯೆ-ಲೇಖಕಿ, ಹೊನ್ನಾವರ